1993-94ನೇ ಸಾಲಿನಲ್ಲಿ (ಏಪ್ರಿಲ್ನಿಂದ ಜನವರಿವರೆಗೆ 10 ತಿಂಗಳಿಗೆ) ರೂ. 61.53 ಕೋಟಿ.

ಹಸಿರು ಪಡಿತರ ಚೀಟಿಗೆ ನೀಡುತ್ತಿರುವ ಪಡಿತರ ವಸ್ತುಗಳನ್ನು ಕಡಿಮೆ ಮಾಡಿರುವುದರ ಬಗ್ಗೆ.

339 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೀರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಸಿರು ಪಡಿತರ ಚೀಟಿಯ ಪದ್ಧತಿಯನ್ನು ಯಾವಾಗ ಪ್ರಾರಂಭಿಸಲಾಯಿತು.*

ಆ) *ಆ ಚೀಟಿಯನ್ನು ಎಂತಹವರಿಗೆ ನೀಡಲಾಗುವುದು ಮತ್ತು ಅದರ ಮೂಲ ಉದ್ದೇಶಗಳೇನು?*

ಇ) *ಹಸಿರು ಪಡಿತರ ಚೀಟಿಯನ್ನು ಹೊಂದಿರುವವರ ಸಂಖ್ಯೆ ಎಷ್ಟು?*

ಈ) *ಆರಂಭದಲ್ಲಿ ಹಸಿರು ಪಡಿತರ ಚೀಟಿಗೆ ನೀಡಲಾಗುತ್ತಿದ್ದ ಪಡಿತರ ವಸ್ತುಗಳ ಪ್ರಮಾಣ ಇಂದಿನ ದಿನಗಳಿಗೆ ಹೋಲಿಸಿದಾಗ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಸಿರು ಪಡಿತರ ಚೀಟಿಯ ಪಡಿತರ ವಸ್ತುಗಳಿಗೆ ಆರಂಭದಲ್ಲಿ ಪ್ರತಿ ಕಿಲೋಗೆ ಎಷ್ಟು ಬೆಲೆ ಇತ್ತು ಹಾಗೂ ಈಗ ಆ ವಸ್ತುಗಳ ಬೆಲೆ ಪ್ರತಿ ಕಿಲೋಗೆ ಎಷ್ಟು ಹೆಚ್ಚಿದೆ.*

ಊ) *ಅದಕ್ಕೆ ಕಾರಣಗಳೇನು?*

ಋ) *ಕಡುಬಡವರ ಉಪಯೋಗಕ್ಕಾಗಿ ಜಾರಿಗೊಳಿಸಲಾಗಿರುವ ಹಸಿರು ಪಡಿತರ ಚೀಟಿಯಲ್ಲಿನ ಪಡಿತರ ವಸ್ತುಗಳನ್ನು ಹಿಂದಿನ ಬೆಲೆ (ಆರಂಭದಲ್ಲಿ ನೀಡಲಾಗುತ್ತಿದ್ದ) ಮಾರಾಟ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ದಿನಾಂಕ : 1-11-1985 ರಿಂದ

ಆ) ಹಸಿರು/ತ್ರಿವರ್ಣ ಪಡಿತರ ಚೀಟಿಯನ್ನು ವಾರ್ಷಿಕ ಆದಾಯ ಮಿತಿ ರೂ. 6400 ಗಳಿಗಿಂತ ಕಡಿಮೆಯಿದ್ದು, ಗ್ರಾಮಾಂತರ ಪ್ರದೇಶದಲ್ಲಿ 20,000 ಜನಸಂಖ್ಯೆಗಿಂತ ಕಡಿಮೆಯಿರುವ ಅರೆ ಪಟ್ಟಣಗಳಲ್ಲಿ, ಹಾಗೂ ನಗರ ಪ್ರದೇಶಗಳಲ್ಲಿ ಘೋಷಿತವಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ನೀಡಲಾಗುವುದು ಅದರ ಮೂಲ ಉದ್ದೇಶವೇನೆಂದರೆ ಹಸಿರು/ತ್ರಿವರ್ಣ ಕಾರ್ಡುದಾರರಿಗೆ ಪ್ರತಿ ಕಾರ್ಡಿಗೆ ಸಬ್ಸಿಡಿ ದರದಲ್ಲಿ ಕಡ್ಡಾಯವಾಗಿ 10ಕೆ.ಜಿ. ಯಂತೆ ಪ್ರತಿ ತಿಂಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವುದು.

ಇ) 46.85 ಲಕ್ಷ. (ತ್ರಿವರ್ಣ).

ಈ) ಕಡಿಮೆ ಮಾಡಿರುವುದಿಲ್ಲ.

ಉ) ವಿವರಗಳು ಈ ಕೆಳಕಂಡಂತಿವೆ :

	ಆರಂಭದ ಬೆಲೆ (1985 ರಲ್ಲಿ) (ರೂ.)	ಪ್ರಸ್ತುತ ಬೆಲೆ (ರೂ.)	ವ್ಯತ್ಯಾಸ (ರೂ.)
ಅಕ್ಕಿ ಅತ್ಯುತ್ತಮ:	2-00	5-45	3-45

ಅಕ್ಕಿ ದಪ್ಪ	:	2-00	5-10	3-10
ಗೋಧಿ	:	1-25	3-45	2-20

ಉ) ಭಾರತ ಸರ್ಕಾರವು ಆಹಾರ ಧಾನ್ಯಗಳ ಹಂಚಿಕೆ ಬೆಲೆಯನ್ನು ಆಗಿಂದಾಗ್ಗೆ ಹೆಚ್ಚಿಗೆ ಮಾಡುತ್ತಿರುವುದರಿಂದ.

ಋ) ರಾಜ್ಯ ಸರ್ಕಾರವು ಈ ವರ್ಷ 70 ಕೋಟಿ ಸಬ್ಸಿಡಿ ಹಣವನ್ನು ಈ ಯೋಜನೆಯಡಿ ಪೂರೈಸಲಾಗಿದೆ. ಭಾರತ ಸರ್ಕಾರದವರು ಬೆಲೆ ಹೆಚ್ಚು ಮಾಡಿದ್ದರೂ ಸಹ ರಾಜ್ಯ ಸರ್ಕಾರವು ಕೊಡುತ್ತಿದ್ದ ಸಬ್ಸಿಡಿ ಕಡಿಮೆ ಮಾಡಿರುವುದಿಲ್ಲ. ಈಗ ಆರಂಭದಲ್ಲಿದ್ದ ಬೆಲೆಗೆ ಹಸಿರು ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಒದಗಿಸುವುದು ಸಾಧ್ಯವಾಗಲಾರದು.

ರಾಜ್ಯ ಸರ್ಕಾರವು ಸಿ.ಬಿ.ಐ.ಗೆ. ವಹಿಸಿರುವ ಪ್ರಕರಣಗಳ ಸಂಖ್ಯೆ.

343-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 2 ವರ್ಷಗಳಲ್ಲಿ ರಾಜ್ಯ ಸರ್ಕಾರವು ಯಾವ ಯಾವ ಪ್ರಕರಣಗಳನ್ನು ತನಿಖೆ ನಡೆಸುವ ಸಲುವಾಗಿ ಸಿಬಿಐ (ಕೇಂದ್ರ ತನಿಖಾದಳ)ಗೆ ವಹಿಸಿಕೊಟ್ಟಿದೆ: (ಪ್ರತಿಯೊಂದು ಪ್ರಕರಣದ ಬಗ್ಗೆ ವಿವರಗಳನ್ನು ನೀಡುವುದು)*

ಮಂಜೂರು ಮಾಡುವ ಬಗ್ಗೆ 2,500-00 ರೂ.ಗಳ.

ಆ) *ಅವುಗಳ ಪೈಕಿ ಎಷ್ಟು ಪ್ರಕರಣಗಳ ತನಿಖೆಯನ್ನು ಸಿಬಿಐ ಈಗಾಗಲೇ ಮುಕ್ತಾಯ ಗೊಳಿಸಿದೆ ಹಾಗೂ ತನಿಖೆ ಮುಗಿದ ಪ್ರಕರಣಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೆ :*

ಇ) *ಆ ವರದಿಯ ಆಧಾರದ ಮೇಲೆ ರಾಜ್ಯ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ:*

ಈ) *ರಾಜ್ಯದ ಸಿಒಡಿ ಸಂಸ್ಥೆಯು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಿಒಡಿಯನ್ನು ಬಿಟ್ಟು ಸಿಬಿಐಗೆ ಪ್ರಕರಣಗಳನ್ನು ನೀಡುವುದರಿಂದ ಜನತೆಗೆ ಸಿಒಡಿಯ ಮೇಲೆ ಶಂಕೆ ಉಂಟಾಗುವುದಿಲ್ಲವೇ?*

ಉ) *ಇನ್ನು ಮುಂದೆ ರಾಜ್ಯ ಸರ್ಕಾರವು ಎಲ್ಲ ಪ್ರಕರಣಗಳನ್ನು ಸಿಒಡಿಗೆ ಮಾತ್ರವೇ ವಹಿಸಿಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳುವುದೇ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಸ್ವರ್ಣ ಫೈನಾನ್ಸ್ ಕಂಪನಿಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಕಬ್ಬನಪಾರ್ಕ್ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 27 :89, 305:89, ಮತ್ತು 366:89 ಭಾ.ದಂ.ಸಂಹಿತೆ ಕಲಂ 420ರ ಪ್ರಕಾರ ದಾಖಲಾದ ಪ್ರಕರಣಗಳನ್ನು ದಿನಾಂಕ 7-4-92 ರಂದು ಸಿಬಿಐ ತನಿಖೆಗೆ ವಹಿಸಲಾಗಿದೆ.

2. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ಲಿಂಗಾಯುತ ಮತ್ತು ಪರಿಶಿಷ್ಟ ಜಾತಿಯವರ ನಡುವೆ ನಡೆದ ಘರ್ಷಣೆಗೆ ಸಂಬಂಧ ಪಟ್ಟಂತೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 59:93 ಮತ್ತು 52:93ರ ಭಾ.ದಂ.ಸಂ. ಕಲಂ 143, 144, 147, 148, 324, 341,302 ಮತ್ತು 3(...) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ನಿಷೇಧ ಕಾಯಿದೆ 1989ರ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪ್ರಕರಣವನ್ನು ದಿನಾಂಕ 11-5-93 ರಂದು ಸಿಬಿಐ ತನಿಖೆಗೆ